ಅ) ಇಲ್ಲ.

ಆ) ಮೇಲಿನ 'ಅ' ಕ್ಕೆ ನೀಡಲಾದ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಮುಲ್ಲಾಮಾರಿ ಯೋಜನೆಯ ಬಗ್ಗೆ

3071-ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಅಪ್ಪರ್ ಮುಲ್ಲಾಮಾರಿ ಯೋಜನೆಗೆ ಇದುವರೆವಿಗೂ ಖರ್ಚಾಗಿರುವ ಒಟ್ಟು ಮೊತ್ತವೆಷ್ಟು?

ಆ) ಕಳೆದ ಸಾಲಿನಲ್ಲಿ ಈ ನೀರಾವರಿ ಯೋಜನೆಗೆ ಎಷ್ಟು ಹಣ ನಿಗದಿ ಮಾಡಲಾಯಿತು. ಮತ್ತು ಅದರಲ್ಲಿ ಖರ್ಚಾದ ಹಣವೆಷ್ಟು?

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ಎಷ್ಟು ಹಣ ಬೇಕಾಗುವುದು ಮತ್ತು ಪೂರ್ತಿ ನೀರಾವರಿ ಯೋಜನೆಯ ಕೆಲಸವನ್ನು ಮುಗಿಸಲು ಸರ್ಕಾರದವರ ಯೋಜನೆ ಏನು?

ಈ) ಇದುವರೆಗೆ ಎಷ್ಟು ಉಪವಿಭಾಗಗಳನ್ನು ಸ್ಥಳಾಂತರಿಸಲಾಗಿದೆ ಹಾಗೇ ಈ ರೀತಿ ಮಾಡಲು ಕಾರಣವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ರೂ. 14.54 ಕೋಟಿ.

ಆ) 1990-91 ನೇ ಸಾಲಿನಲ್ಲಿ ನಿಗದಿಪಡಿಸಿದ ಹಣ ರೂ. 90 ಲಕ್ಷ ಖರ್ಚಾದ ಹಣ ರೂ. 131 ಲಕ್ಷ

ಇ) ಈ ಕಾಮಗಾರಿಗಳನ್ನು ಪೂರ್ಣಗೊಳಿಸಲು ಇನ್ನೂ ರೂ. 82 ಲಕ್ಷಗಳು ಬೇಕಾಗುವುದು.

1991-92ನೇ ಸಾಲಿನಲ್ಲಿ ಕೆಲಸವನ್ನು ಮುಗಿಸಲು ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.

ಈ) ಕೆಲಸಗಳು ಮುಕ್ತಾಯ ಹಂತದಲ್ಲಿರುವುದರಿಂದ ಎರಡು ಉಪ ವಿಭಾಗಗಳನ್ನು ಸ್ಥಳಾಂತರಿಸಲಾಗಿದೆ.

ಚುಳಕೆ ನಾಲೆಯ ಬಗ್ಗೆ

3072-ಶ್ರೀ ಬಸವರಾಜ್ ಪಾಟೀಲ ಅಟ್ಟೂರು(ಬಸವಕಲ್ಯಾಣ): ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಚುಳಕೆ ನಾಲಾ ನೀರಾವರಿ ಯೋಜನೆಗೆ ಹೋದ ವರ್ಷ ಮಂಜೂರಾದ ಹಣವೆಷ್ಟು ಮತ್ತು ಖರ್ಚಾದ ಹಣವೆಷ್ಟು?

ಆ) ಮೇಲಿನ ಯೋಜನೆಗೆ ಹಣ ಮಂಜೂರಾದರೂ ಕೂಡಾ ಕೆಲಸ ಕಾರ್ಯಗಳು ಮಂದಗತಿಯಲ್ಲಿ ನಡೆಯಲು ಕಾರಣವೇನು?

ಇ) ಮಂಜೂರಾದ ಹಣವನ್ನು ಸಹ ಖರ್ಚು ಮಾಡುತ್ತಿರುವುದರ ಬಗ್ಗೆ ಸರ್ಕಾರದ ಕ್ರಮವೇನು?

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್(ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) 1990-91ನೇ ಸಾಲಿನಲ್ಲಿ ಮಂಜೂರಾದ ಮತ್ತು ಖರ್ಚಾದ ಹಣದ ವಿವರಗಳನ್ನು ಕೆಳಗೆ ಕೊಡಲಾಗಿದೆ.

	ಅನುದಾನ	ವೆಚ್ಚ
ಬಜೆಟ್ ಅನುದಾನ	2.50	0.85
ಹೈದ್ರಾಬಾದ್-ಕರ್ನಾಟಕ ಅಭಿವೃದ್ಧಿ ಮಂಡಳಿ	1.00	0.25
ಒಟ್ಟು	3.50	1.10

ಆ) ನವೆಂಬರ್ 1990ರ ಅಂತ್ಯದವರೆಗೆ ಅವ್ಯಾಹತವಾಗಿ ಸುರಿದ ಮಳೆಯಿಂದಾಗಿ ಯೋಜಿತ ಕೆಲಸಗಳನ್ನು ಗರಿಷ್ಠ ಪ್ರಮಾಣದಲ್ಲಿ ನಿರ್ವಹಿಸಲಾಗಲಿಲ್ಲ.

ಇ) ಹೈದ್ರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಯ ಅಡಿಯಲ್ಲಿ ಉಳಿದ ಹಣವನ್ನು 91-92ನೇ ಸಾಲಿಗೆ ಮುಂದುವರಿಸಿಕೊಂಡು ಹೋಗಲಾಗಿದೆ. 91-92ನೇ ಸಾಲಿನಲ್ಲಿ ಈ ಯೋಜನೆಗೆ ಬಜೆಟ್ ಅನುದಾನ ರೂ. 3 ಕೋಟಿ ಇದೆ. ಯೋಜನೆಯ ಕೆಲಸಗಳನ್ನು ಚುರುಕುಗೊಳಿಸಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.

ಹಣದ ದುರುಪಯೋಗದ ಬಗ್ಗೆ

3052-ಶ್ರೀ ಬಸವರಾಜ ಪಾಟೀಲ್ ಅಟ್ಟೂರ್ (ಬಸವಕಲ್ಯಾಣ): ಮಾನ್ಯ ಗ್ರಾಮೀಣಾಭಿವೃದ್ಧಿ ಪಂಚಾಯತ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೀದರ್ ಜಿಲ್ಲೆಯ ಉಪ ನಿರ್ದೇಶಕರು(ಡಿಡಿಪಿಐ) ಸಾರ್ವಜನಿಕ ಶಿಕ್ಷಣ ಇಲಾಖೆ, ಇವರ ಮೇಲೆ ಹಣದ ದುರುಪಯೋಗ ಹಾಗೂ ಅವ್ಯವಹಾರಗಳ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಮೇಲಿನ ಅಧಿಕಾರಿಗಳ ಮೇಲೆ ಜಿಲ್ಲಾ ಪರಿಷತ್ತು ಬೀದರ್, ತೆಗೆದುಕೊಂಡಿರುವ ಕ್ರಮಗಳೇನು?

ಇ) ಮೇಲಿನ ಅಧಿಕಾರಿಗಳ ಅವ್ಯವಹಾರಗಳ ಬಗ್ಗೆ ಸಿ.ಒ.ಡಿ. ತನಿಖೆಗೆ ಒಳಪಡಿಸಿ ಜನರಿಗಾಗುತ್ತಿರುವ ತೊಂದರೆಯನ್ನು ನಿವಾರಿಸಲು ಸರ್ಕಾರದ ಕ್ರಮಗಳೇನು?

ಶ್ರೀ ಕೆ.ಹೆಚ್. ಪಾಟೀಲ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):

ಅ) ಹೌದು-ಬಂದಿದೆ-ಶಿಕ್ಷಣ ಇಲಾಖೆಗೆ

ಆ) ಬೀದರ್ ಜಿಲ್ಲಾ ಪರಿಷತ್ತು ತನ್ನ ದಿನಾಂಕ 12-8-91ರ ಸಭೆಯಲ್ಲಿ ಸದರಿ ಅಧಿಕಾರಿಯನ್ನೂ ತಕ್ಷಣ ಕೆಲಸದಿಂದ ವಿಮುಕ್ತಗೊಳಿಸಬೇಕೆಂದೂ ಹಾಗೂ ಆತನನ್ನು ಅಮಾನತ್ತಿನಲ್ಲಿಡುವಂತೆಯೂ ಮತ್ತು ಸದರಿ ಪ್ರಕರಣವನ್ನು ಸಿ.ಒ.ಡಿ. ತನಿಖೆಗೆ ವಹಿಸುವಂತೆಯೂ ನಿರ್ಣಯಿಸಿರುತ್ತೆ.

ಅದರಂತೆ ಸದರಿ ಅಧಿಕಾರಿಯನ್ನು ದಿನಾಂಕ 15-8-1991ರ ಅಪರಾಹ್ನ ಕೆಲಸದಿಂದ ವಿಮುಕ್ತಿಗೊಳಿಸಲಾಗಿದೆ.